ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಜಂ ನಿ : ಸುಮಪ : 2020–21 ದಿನಾಂಕ : 14–10–2020

# ಮಾಧ್ಯಮ ಪ್ರತಿನಿಧಿಗಳ ಗಮನಕ್ಕೆ

ಕರ್ನಾಟಕ ವಿಧಾನ ಪರಿಷತ್ ಚುನಾವಣೆ (28-10-2020) ಹಾಗೂ ಕರ್ನಾಟಕ ವಿಧಾನಸಭೆಯ ಉಪಚುನಾವಣೆ (03-11-2020) ಮತದಾನದ ಹಾಗೂ ಮತ ಎಣಿಕೆ ದಿನದ ವರದಿಗಾಗಿ ಪ್ರವೇಶ ಪತ್ರ ಕೋರಿ ಹೆಸರು ನೋಂದಾಯಿಸಿಕೊಂಡವರು ತಮ್ಮ ಇತ್ತೀಚಿನ ನಾಲ್ಕು ಪಾಸ್ ಪೋರ್ಟ್ ಅಳತೆಯ ಭಾವಚಿತ್ರಗಳನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸುದ್ದಿ ಮತ್ತು ಪತ್ರಿಕಾ ಶಾಖೆಯ ಶ್ರೀಮತಿ ಡಾ.ಕೆ.ಎನ್.ಕವನ, ಸಹಾಯಕ ನಿರ್ದೇಶಕರು ಇವರಿಗೆ ನಾಳೆ ಸಂಜೆಯೊಳಗಾಗಿ ಸಲ್ಲಿಸಲು **ಕೋರಿದೆ.**

**ವಿಶೇಷ ಸೂಚನೆ : ಪ್ರತಿ ಭಾವಚಿತ್ರಗಳ ಹಿಂಭಾಗದಲ್ಲಿ ತಮ್ಮ ಹೆಸರು, ದೂರವಾಣಿ ಹಾಗೂ ಮಾಧ್ಯಮ ಸಂಸ್ಥೆಯ ಹೆಸರನ್ನು ತಪ್ಪದೇ ಬರೆಯಲು ಕೋರಿದೆ.**

## ಪತ್ರಿಕಾ ಪ್ರಕಟಣೆ

## "ಸುರಕ್ಷಿತವಾಗಿರಿ ಹಾಗೂ ಇತರರನ್ನು ಸುರಕ್ಷಿತವಾಗಿರಿಸಿ"
## ಕೋವಿಡ್–19 ಜಾಗೃತಿ ಕಾರ್ಯಕ್ರಮ

ಬೆಂಗಳೂರು, ಅಕ್ಟೋಬರ್ 14 (ಕರ್ನಾಟಕ ವಾರ್ತೆ): ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರ, ಕರ್ನಾಟಕ ಉಚ್ಚ ನ್ಯಾಯಾಲಯ ಕಾನೂನು ಸೇವಾ ಸಮಿತಿ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಮತ್ತು ಕರ್ನಾಟಕ ರಾಜ್ಯ ವಕೀಲರ ಪರಿಷತ್ ಹಾಗೂ ಬೆಂಗಳೂರು ವಕೀಲರ ಸಂಘ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಕೋವಿಡ್-19 ಜಾಗೃತಿ "ಸುರಕ್ಷಿತವಾಗಿರಿ ಹಾಗೂ ಇತರರನ್ನು ಸುರಕ್ಷಿತವಾಗಿರಿಸಿ" ಕಾರ್ಯಕ್ರಮಕ್ಕೆ ಇಂದು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳಾದ ಅಭಯ್ ಶ್ರೀನಿವಾಸ ಓಕಾ ಅವರು ಚಾಲನೆ ನೀಡಿದರು.

ಇಂದು ರಾಜ್ಯ ಉಚ್ಚ ನ್ಯಾಯಾಲಯದ ಆವರಣದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಪ್ರತಿಜ್ಞಾವಿಧಿ ಬೋಧಿಸಿದ ಅವರು ನಂತರ ಸಾರ್ವಜನಿಕರ ಜಾಗೃತಿಗಾಗಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವಿಶೇಷವಾಗಿ ನಿರ್ಮಿಸಿದ್ದ ಕೋವಿಡ್ ಜಾಗೃತಿ ಸಂದೇಶಗಳನ್ನು ಒಳಗೊಂಡ ಎಲ್.ಇ.ಡಿ ವಾಲ್ ಹೊಂದಿರುವ ವಾಹನಕ್ಕೆ ಚಾಲನೆ ನೀಡಿದರು.

ಕೋವಿಡ್-19 ಜಾಗೃತಿ ಸಂದೇಶಗಳನ್ನೊಳಗೊಂಡ ಭಿತ್ತಿಪತ್ರ ಹಾಗೂ ಸಂದೇಶಗಳೊಂದಿಗೆ ಹಲವಾರು ವಿಶೇಷ ವಾಹನದ ಜೊತೆಯಲ್ಲಿ ಸಿಟಿ ಸಿವಿಲ್ ಕೋರ್ಟ್ ಆವರಣದವರೆಗೆ ಹೆಜ್ಜೆ ಹಾಕಿದ್ದು ವಿಶೇಷವಾಗಿತ್ತು.

<u>ಸಿಟಿ ಸಿವಿಲ್ ಕೋರ್ಟ್</u>: ಕರ್ನಾಟಕ ಉಚ್ಚ ನ್ಯಾಯಾಲಯ ಆವರಣದಿಂದ ಪ್ರಾರಂಭವಾದ ಕೋವಿಡ್-19 ಜಾಗೃತಿ ಜಾಥಾವನ್ನು ಸಿಟಿ ಸಿವಿಲ್ ಕೋರ್ಟ್ ಆವರಣದಲ್ಲಿ ವಿಶೇಷವಾಗಿ ಬರಮಾಡಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ಸಿಟಿ ಸಿವಿಲ್ ಕೋರ್ಟ್ ನ್ಯಾಯಾಧೀಶರು ಸೇರಿದಂತೆ ವಕೀಲರ ಸಂಘದ ಹಿರಿಯ ಪದಾಧಿಕಾರಿಗಳು ಉಪಸ್ಥಿತರಿದ್ದರು.

<u>ಕೋವಿಡ್-19 ಜಾಗೃತಿ ವಾಹನ ಸಂಚಾರ</u>: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಕೋವಿಡ್-19 ಕುರಿತು, ವಿಶೇಷ ಸಂದೇಶಗಳನ್ನು ಹೊಂದಿರುವ ಎಲ್.ಇ.ಡಿ ವಾಹನವು ಇಂದು ಬೆಳಿಗ್ಗೆ ಕರ್ನಾಟಕ ರಾಜ್ಯ ಉಚ್ಚ ನ್ಯಾಯಲಯದಿಂದ ಪ್ರಾರಂಭವಾಗಿ ಸಿಟಿ ಸಿವಿಲ್ ಕೋರ್ಟ್ ಮುಖಾಂತರ ವಿಧಾನಸೌಧ, ಎಂ.ಜಿ. ರೋಡ್, ಕಂಟೋನ್ಮೆಂಟ್ ರೈಲ್ವೆ ಸ್ಟೇಷನ್, ಕಾರ್ಪೋರೇಷನ್ ಸರ್ಕಲ್, ಕೆ.ಆರ್.ಸರ್ಕಲ್, ಕೆ.ಆರ್. ಮಾರುಕಟ್ಟೆ, ಚಾಮರಾಜಪೇಟೆ, ಜಯನಗರ, ಜೆ.ಪಿ.ನಗರ, ಮುಖಾಂತರ ಇಂದು ರಾತ್ರಿ 8:30 ಗಂಟೆಗೆ ಬನಶಂಕರಿಯಲ್ಲಿ ಸಮಾರೋಪಗೊಳ್ಳಲಿದೆ.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಉಚ್ಚ ನ್ಯಾಯಲಯದ ನ್ಯಾಯ ಮೂರ್ತಿಗಳಾದ ಅರವಿಂದ್ ಕುಮಾರ್, ಅಲೋಕ್ ಆರಾಧೆ, ಶ್ರೀಮತಿ ಬಿ.ವಿ.ನಾಗರತ್ನ, ಶ್ರೀಮತಿ ಸುಜಾತ, ಬಿ.ವೀರಪ್ಪ, ಜಿ.ನರೇಂದ್ರ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತರಾದ ಡಾ.ಪಿ.ಎಸ್.ಹರ್ಷ ಅವರು ಉಪಸ್ಥಿತರಿದ್ದರು.

## <u>ಕೋವಿಡ್-19 ಕುರಿತು ಜಾಗೃತಿವಹಿಸಿ : ಡಾ: ಪಿ.ಎಸ್.ಹರ್ಷ</u>

ಬೆಂಗಳೂರು, ಅಕ್ಟೋಬರ್ 14 (ಕರ್ನಾಟಕ ವಾರ್ತೆ): ಕೋವಿಡ್-19 ಮಾರಕ ರೋಗ ಹರಡದಂತೆ ಕೈಗೊಳ್ಳಬೇಕಾದ ಜಾಗೃತಿ ಕುರಿತ ಪ್ರತಿಜ್ಞಾ ವಿಧಿಯನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಆಯುಕ್ತ ಡಾ. ಪಿ. ಎಸ್. ಹರ್ಷ ಅವರು ಇಂದು ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ಬೋಧಿಸಿದರು.

ನಂತರ ಮಾತನಾಡಿದ ಆಯುಕ್ತರು, ನಾವು ಎಷ್ಟು ಮುನ್ನೆಚ್ಚರಿಕೆ ವಹಿಸುತ್ತೇವೆಯೋ ಅಷ್ಟೇ ಸುರಕ್ಷಿತರಾಗಿರುತ್ತೇವೆ, ಜೊತೆಗೆ ನಮ್ಮ ಕುಟುಂಬ ಮತ್ತು ನಮ್ಮ ಸುತ್ತಮುತ್ತಲ ಜನರನ್ನು ಈ ರೋಗದಿಂದ ರಕ್ಷಿಸುತ್ತೇವೆ ಎಂದರು.

ಹಿರಿಯರ, ಮಕ್ಕಳು ಇರುವ ಕುಟುಂಬದವರು ಮುಂಜಾಗ್ರತೆಯಾಗಿ ಮನೆಯಲ್ಲಿ ಥರ್ಮಾಮೀಟರ್ ಮತ್ತು ಪಲ್ಸ್ ಆಕ್ಸಿಮೀಟರನ್ನು ಇಟ್ಟುಕೊಳ್ಳಬೇಕು. ಸಾಮಾಜಿಕ ಅಂತರ ಕಾಯ್ದುಕೊಳ್ಳಬೇಕು. ಕಡ್ಡಾಯವಾಗಿ ಮಾಸ್ಕ್ ಧರಿಸಬೇಕು. ನೀರು ಮತ್ತು ಸಾಬೂನಿನಿಂದ ಪದೇ ಪದೇ ಕೈ ಕೈತೊಳೆಯಬೇಕು. ಸ್ಯಾನಿಟೈಸರ್ ಬಳಸಬೇಕು. ಅವಶ್ಯಕತೆ ಇದ್ದಾಗ ಮಾತ್ರ ಮನೆಯಿಂದ ಹೊರಗೆ ಹೋಗಬೇಕು. ಎಂದರು.

ಯಾವುದೇ ರೋಗ ಲಕ್ಷಣ ಇಲ್ಲದ ವ್ಯಕ್ತಿ ಸಹ ಈ ಸೋಂಕನ್ನು ಬೇರೆಯವರಿಗೆ ಹರಡುವ ಸಾಧ್ಯತೆ ಇರುವುದರಿಂದ ಎಲ್ಲರೂ ಅಂತರ ಕಾಯ್ದುಕೊಂಡು ಸುರಕ್ಷಿತವಾಗಿರಬೇಕು. ಎಲ್ಲರೂ ಕೋವಿಡ್ ವಿರುದ್ಧ ಜಯ ಸಾಧಿಸೋಣ ಎಂದರು.

ಈ ಸಂದರ್ಭದಲ್ಲಿ ಇಲಾಖೆಯ ಜಂಟಿ ನಿರ್ದೇಶಕರಾದ ಎ.ಆರ್.ಪ್ರಕಾಶ್, ಉಪನಿರ್ದೇಶಕರಾದ ಪುಟ್ಟಸ್ವಾಮಯ್ಯ ಹಾಗೂ ಸಿಬ್ಬಂದಿಗಳು ಉಪಸ್ಥಿತರಿದ್ದರು.

## ಸಾರಿಗೆ ಇಲಾಖೆಯಲ್ಲಿ ಶೀಘ್ರದಲ್ಲೇ ಆನ್‌ಲೈನ್ ಸೇವಾ ತಂತ್ರಾಂಶ

**ಬೆಂಗಳೂರು, ಅಕ್ಟೋಬರ್ 14 (ಕರ್ನಾಟಕ ವಾರ್ತೆ):**

ಸಾರಿಗೆ ಇಲಾಖೆಯಿಂದ ಸಾರ್ವಜನಿಕರಿಗೆ ನೀಡಲಾಗುತ್ತಿರುವ ಹಲವಾರು ಸೇವೆಗಳನ್ನು ಆನ್‌ಲೈನ್ ಮೂಲಕ ನೀಡಲು ಉದ್ದೇಶಿಸಿದೆ. ಸರಕು ಸಾಗಣೆ ಪರವಾನಗಿಗಳನ್ನು ಪಡೆಯಲು ಹಾಗೂ ವಾಹನಗಳ ಮಾಲೀಕತ್ವ ವರ್ಗಾವಣೆಗಳನ್ನು ಸಾರ್ವಜನಿಕರು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿಗಳಿಗೆ ಭೇಟಿ ನೀಡದೆ ತಾವು ಇದ್ದಲ್ಲಿಂದಲೇ ಆನ್‌ಲೈನ್ ಮೂಲಕ ಈ ಸೇವೆಗಳನ್ನು ಪಡೆಯುವಂತೆ ಈಗಾಗಲೇ ತಂತ್ರಾಂಶವನ್ನು ಸಿದ್ಧಪಡಿಸಿದ್ದು ಸದ್ಯದಲ್ಲೆ ಬಿಡುಗಡೆಗೊಳಿಸಲಾಗುವುದು.

ಇದಲ್ಲದೆ ನಕಲು ಚಾಲನಾ ಅನುಜ್ಞಾ ಪತ್ರ, ಚಾಲನಾ ಅನುಜ್ಞಾಪತ್ರ ನವೀಕರಣ, ನಕಲು ನೋಂದಣಿ ಪ್ರಮಾಣ ಪತ್ರ, ಬಿಡುಗಡೆ ಪ್ರಮಾಣ ಪತ್ರ ಇತ್ಯಾದಿಗಳನ್ನು ಸಂಪೂರ್ಣವಾಗಿ ಆನ್‌ಲೈನ್ ಮೂಲಕ ದೊರಕುವಂತೆ ಮಾಡಲು ಉದ್ದೇಶಿಸಲಾಗಿದೆ.

ಈ ಎಲ್ಲಾ ಆನ್‌ಲೈನ್ ಸೇವೆಗಳನ್ನು ಪಡೆಯಲು ಸಂಬಂಧಪಟ್ಟ ವ್ಯಕ್ತಿಯೇ ಅರ್ಜಿ ಸಲ್ಲಿಸಿರುವುದನ್ನು ಖಾತ್ರಿ ಪಡಿಸಿಕೊಳ್ಳಲು ವಾಹನ ನೋಂದಣಿ/ಚಾಲನಾ ಅನುಜ್ಞಾ ಪತ್ರ ಪಡೆಯುವ ಸಮಯದಲ್ಲಿ ನೀಡಲಾದ ಮೊಬೈಲ್ ಸಂಖ್ಯೆಗೆ ಓನ್‌ಟೈಮ್ ಪಾಸ್‌ವರ್ಡ್(one time password) ಕಳುಹಿಸಲಾಗುವುದು. ಸಾರಿಗೆ ಇಲಾಖೆಯ ಸಾರಥಿ/ವಾಹನ್ ಡೇಟಾ ಬೇಸ್‌ಗಳಲ್ಲಿ ಇರುವ ಮೊಬೈಲ್ ಸಂಖ್ಯೆಗಳು ಸಂಬಂಧಪಟ್ಟ ವ್ಯಕ್ತಿಯದಾಗಿರದೆ ಬೇರೆಯವರ ಮೊಬೈಲ್ ಸಂಖ್ಯೆಯನ್ನು ನಮೂದಿಸಿರುವ ಹಲವಾರು ಪ್ರಕರಣಗಳು ಗಮನಕ್ಕೆ ಬಂದಿವೆ.

**ಆನ್‌ಲೈನ್ ಸೇವೆಯನ್ನು ಪಡೆಯಲು ವಾಹನ ಮಾಲೀಕರು/ಚಾಲನಾ ಅನುಜ್ಞಾಪತ್ರ ಹೊಂದಿರುವ ವ್ಯಕ್ತಿಯ ಮೊಬೈಲ್ ಸಂಖ್ಯೆಯನ್ನೇ ಬಳಸುವುದು ಅವಶ್ಯಕ ಇರುವುದರಿಂದ ಎಲ್ಲಾ ಸಂಬಂಧಪಟ್ಟವರು** parivahan.gov.in **ಪೋರ್ಟಲ್‌ನಲ್ಲಿ ತಮ್ಮ ಮೊಬೈಲ್ ಸಂಖ್ಯೆಗಳನ್ನು ಪರಿಷ್ಕರಿಸುವಂತೆ** (update) **ಆಯುಕ್ತರು ಸಾರಿಗೆ ಮತ್ತು ರಸ್ತೆ ಸುರಕ್ಷತೆ ಬೆಂಗಳೂರು ಇವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.**

## "ಜನಸಾಮಾನ್ಯರಿಗಾಗಿ ವಿಜ್ಞಾನ ಮತ್ತು ತಂತ್ರಜ್ಞಾನ" ಕಾರ್ಯಕ್ರಮ

**ಬೆಂಗಳೂರು, ಅಕ್ಟೋಬರ್ 14 (ಕರ್ನಾಟಕ ವಾರ್ತೆ):**_ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ (ಕೆಸ್ಟೆಪ್ಸ್) ಇವರಿಂದ ಜನ ಸಾಮಾನ್ಯರಿಗೆ ವಿಜ್ಞಾನ ಮತ್ತು ತಂತ್ರಜ್ಞಾನವನ್ನು ತಲುಪಿಸುವ ನಿಟ್ಟಿನಲ್ಲಿ ವೆಬಿನಾರ್ ಸರಣಿ "ಜನಸಾಮಾನ್ಯರಿಗಾಗಿ ವಿಜ್ಞಾನ ಮತ್ತು ತಂತ್ರಜ್ಞಾನ"ಕಾರ್ಯಕ್ರಮವನ್ನು ಹಮ್ಮಿಕೊಳ್ಳುತ್ತಿದೆ. ಜನರನ್ನು ಪ್ರಸ್ತುತದ ವಿಜ್ಞಾನ ಮತ್ತು ತಂತ್ರಜ್ಞಾನ ವಿಷಯಗಳ ಬಗ್ಗೆ ಪ್ರೇರೇಪಿಸಲು ಇಂತಹ ಕಾರ್ಯಕ್ರಮವು ಅವಶ್ಯಕವಾಗಿದೆ.

ಈ ವೆಬಿನಾರ್ ಸರಣಿಯಲ್ಲಿ ಪ್ರತಿ ವಾರ ಉಪನ್ಯಾಸ ಕಾರ್ಯಕ್ರಮಗಳನ್ನು ಹಲವಾರು ಗಣ್ಯ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಸುರೇಶ್ ಹೆಬ್ಳೀಕರ್, ಖ್ಯಾತ ಪರಿಸರವಾದಿ, ಶ್ರೀಮತಿ ಸುಮಂಗಲ ಮುಮ್ಮಿಗಟ್ಟಿ, ಕಾರ್ಯಕ್ರಮ ಕಾರ್ಯನಿರ್ವಾಹಕರು, ಆಕಾಶವಾಣಿ, ಶ್ರೀ ಶ್ರೀನಿವಾಸುಲು IFS , ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಶ್ರೀ ಮಧುಸೂದನ್, ಸಹಾಯಕ ನಿರ್ದೇಶಕರು ಜವಾಹರಲಾಲ್ ನೆಹರು ತಾರಾಲಯ, ಬೆಂಗಳೂರು ಹಾಗೂ ಮುಂತಾದವರು ನಡೆಸಿಕೊಡಲಿದ್ದಾರೆ.

ದಿನಾಂಕ: 16.10.2020 ರಂದು ಪ್ರಾರಂಭವಾಗಲಿರುವ ಈ ಕಾರ್ಯಕ್ರಮವನ್ನು ಶ್ರೀ ಸುರೇಶ್ ಹೆಬ್ಳೀಕರ್, ಕನ್ನಡ ಚಿತ್ರ ನಿರ್ಮಾಪಕರು, ನಿರ್ದೇಶಕರು ಹಾಗೂ ಖ್ಯಾತ ಪರಿಸರವಾದಿ ಇವರು ನಡೆಸಿಕೊಡಲಿದ್ದಾರೆ. ಆಸಕ್ತರು ಹೆಚ್ಚಿನ ಮಾಹಿತಿಗಾಗಿ www.ksteps.karnataka.gov.in ಗೆ ಭೇಟಿ ನೀಡಿ.

## ಬೆಂಗಳೂರು ಶಿಕ್ಷಕರ ಕ್ಷೇತ್ರ ವಿಧಾನ ಪರಿಷತ್ ಚುನಾವಣೆ: ದೂರು, ಮೇಲ್ವಿಚಾರಣೆಗಾಗಿ ಕಂಟ್ರೋಲ್ ರೂಂ ಸ್ಥಾಪನೆ

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಅಕ್ಟೋಬರ್ 14 (ಕರ್ನಾಟಕ ವಾರ್ತೆ):- ಭಾರತ ಚುನಾವಣಾ ಆಯೋಗವು ಬೆಂಗಳೂರು ಶಿಕ್ಷಕರ ಕ್ಷೇತ್ರದಿಂದ ಕರ್ನಾಟಕ ವಿಧಾನ ಪರಿಷತ್ತಿಗೆ ದ್ವೈವಾರ್ಷಿಕ ಚುನಾವಣೆ ನಡೆಸಲು ವೇಳಾಪಟ್ಟಿಯನ್ನು ನಿಗದಿಪಡಿಸಿದ್ದು, ಸದರಿ ಚುನಾವಣಾ ಪ್ರಕ್ರಿಯೆಯು ದಿನಾಂಕ: 01/10/2020 ರಿಂದ ದಿನಾಂಕ: 05/11/2020 ರವರೆಗೆ ನಡೆಯಲಿದ್ದು, ಚುನಾವಣೆಗೆ ಸಂಬಂಧಿಸಿದ ಸದಾಚಾರ ನೀತಿ ಸಂಹಿತೆಯ ದಿನಾಂಕ: 29/09/2020 ರಿಂದಲೇ ಜಾರಿಗೆ ಬಂದಿರುತ್ತದೆ.

ಚುನಾವಣೆಗೆ ಸಂಬಂಧಿಸಿದ ದೂರು, ಮೇಲ್ವಿಚಾರಣೆಗಾಗಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಕಂಟ್ರೋಲ್ ರೂಂ ಅನ್ನು ಸ್ಥಾಪಿಸಲಾಗಿದ್ದು, ಮತದಾನವು ದಿನಾಂಕ: 28/10/2020 ಬುಧವಾರದಂದು ನಡೆಯಲಿದೆ.

ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ರವರು ಬೆಂಗಳೂರು ಶಿಕ್ಷಕರ ಕ್ಷೇತ್ರದ ಚುನಾವಣಾಧಿಕಾರಿಯಾಗಿದ್ದು, ಚುನಾವಣಾ ಸಂಬಂಧಿತ ವಿವಿಧ ದೂರುಗಳಿಗೆ, ಮೇಲ್ವಿಚಾರಣೆ ಹಾಗೂ ನಿವಾರಣೆ ಸಲುವಾಗಿ ಕಂಟ್ರೋಲ್ ರೂಂ ಸ್ಥಾಪಿಸಲಾಗಿದೆ.

ಬೆಂಗಳೂರು ಶಿಕ್ಷಕರ ಕ್ಷೇತ್ರ ಚುನಾವಣಾ ವ್ಯಾಪ್ತಿಗೆ ಬಿ.ಬಿ.ಎಂ.ಪಿ ವಲಯಗಳು, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳು ಬರಲಿದ್ದು, ಈ ಚುನಾವಣಾ ಸಂಬಂಧಿತ ವಿವಿಧ ದೂರುಗಳಿಗೆ ಮೇಲ್ವಿಚಾರಣೆ ಹಾಗೂ ನಿವಾರಣೆಗಾಗಿ ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತರ ಕಚೇರಿ, ದೂ.ಸಂ.: 080-22109680 ಅನ್ನು ಸಂಪರ್ಕಿಸಬಹುದಾಗಿದೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿ.ಬಿ.ಎಂ.ಪಿ.) ಕೇಂದ್ರ ಚುನಾವಣೆ ವಿಭಾಗ ದೂ.ಸಂ.: 080-22975564, ಮೊ.ಸಂ.: 8660426283, ಬಿ.ಬಿ.ಎಂ.ಪಿ. ದಕ್ಷಿಣ ಕಂಟ್ರೋಲ್ ರೂಂ, ದೂ.ಸಂ.: 080-26566362, ಬಿ.ಬಿ.ಎಂ.ಪಿ. ದಾಸರಹಳ್ಳಿ ವಲಯದ ಜಂಟಿ ಆಯುಕ್ತರು, ಮೊ.ಸಂ.: 9480685855, ದೂ.ಸಂ.: 080-22975901, ಬಿ.ಬಿ.ಎಂ.ಪಿ. ಮಹದೇವಪುರ ವಲಯದ ಜಂಟಿ ಆಯುಕ್ತರು, ಮೊ.ಸಂ.: 9513322144, ದೂ.ಸಂ.: 080-28511166, ಬಿ.ಬಿ.ಎಂ.ಪಿ. ಯಲಹಂಕ ವಲಯದ ಜಂಟಿ ಆಯುಕ್ತರು, ಮೊ.ಸಂ.: 9480685228, ದೂ.ಸಂ.: 080-22975942, ಬಿ.ಬಿ.ಎಂ.ಪಿ. ಬೊಮ್ಮನಹಳ್ಳಿ ವಲಯದ ಜಂಟಿ ಆಯುಕ್ತರು, ಮೊ.ಸಂ.: 9480683433, ದೂ.ಸಂ.: 080-25732628, ಬಿ.ಬಿ.ಎಂ.ಪಿ. ರಾಜರಾಜೇಶ್ವರಿ ನಗರ ವಲಯದ ಜಂಟಿ ಆಯುಕ್ತರು, ದೂ.ಸಂ.: 080-22975801, ಬಿ.ಬಿ.ಎಂ.ಪಿ. ಬೆಂಗಳೂರು ಪೂರ್ವ ವಲಯದ ಜಂಟಿ ಆಯುಕ್ತರು, ಮೊ.ಸಂ.: 9480685619, ದೂ.ಸಂ.: 080-22975801, ಬಿ.ಬಿ.ಎಂ.ಪಿ. ಬೆಂಗಳೂರು ಪಶ್ಚಿಮ ವಲಯದ ಜಂಟಿ ಆಯುಕ್ತರು, ಮೊ.ಸಂ.: 9480685411, ದೂ.ಸಂ.: 080-22975648, ಬಿ.ಬಿ.ಎಂ.ಪಿ. ಬೆಂಗಳೂರು ದಕ್ಷಿಣ ವಲಯದ ಜಂಟಿ ಆಯುಕ್ತರು, ಮೊ.ಸಂ.: 9901462568, ದೂ.ಸಂ.: 080-26566362 ಅನ್ನು ಸಂಪರ್ಕಿಸಿ ದೂರು ದಾಖಲಿಸಬಹುದಾಗಿದೆ.

ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿಯವರ ಕಚೇರಿ. ದೂ.ಸಂ.: 080-22211106, ಬೆಂಗಳೂರು ಉತ್ತರ ತಾಲ್ಲೂಕು ಕಚೇರಿ, ದೂ.ಸಂ.: 080-22232050, ಬೆಂಗಳೂರು ದಕ್ಷಿಣ ತಾಲ್ಲೂಕು ಕಚೇರಿ, ದೂ.ಸಂ.: 080-22223153, ಬೆಂಗಳೂರು ಪೂರ್ವ ತಾಲ್ಲೂಕು ಕಚೇರಿ, ದೂ.ಸಂ.: 080-28512300, ಯಲಹಂಕ, ತಾಲ್ಲೂಕು ಕಚೇರಿ, ದೂ.ಸಂ.: 080-28560696, ಆನೇಕಲ್, ತಾಲ್ಲೂಕು ಕಚೇರಿ, ದೂ.ಸಂ.: 080-27859234, ಮೊ.ಸಂ.: 9916551736 ಅನ್ನು ಸಂಪರ್ಕಿಸಿ ದೂರು ದಾಖಲಿಸಬಹುದಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಜಿಲ್ಲಾಧಿಕಾರಿಯವರ ಕಚೇರಿ, ದೂ.ಸಂ.: 080-29781021, ನೆಲಮಂಗಲ ತಾಲ್ಲೂಕು ಕಚೇರಿ, ದೂ.ಸಂ.: 080-27722126, ದೊಡ್ಡಬಳ್ಳಾಪುರ ತಾಲ್ಲೂಕು ಕಚೇರಿ, ದೂ.ಸಂ.: 080-27622002, ದೇವನಹಳ್ಳಿ ತಾಲ್ಲೂಕು ಕಚೇರಿ, ದೂ.ಸಂ.: 080-27682109, ಮೊ.ಸಂ.: 9980234590, ಹೊಸಕೋಟೆ ತಾಲ್ಲೂಕು ಕಚೇರಿ, ದೂ.ಸಂ.: 080-27931237 ಅನ್ನು ಸಂಪರ್ಕಿಸಿ ದೂರು ದಾಖಲಿಸಬಹುದಾಗಿದೆ.

ರಾಮನಗರ ಜಿಲ್ಲೆಯ ಜಿಲ್ಲಾಧಿಕಾರಿಯವರ ಕಚೇರಿಯ ಕಂಟ್ರೋಲ್ ರೂಂ, ದೂ.ಸಂ.: 080-27276615, ರಾಮನಗರ ತಾಲ್ಲೂಕು ಕಚೇರಿ, ದೂ.ಸಂ.: 080-27271229, ಚನ್ನಪಟ್ಟಣ ತಾಲ್ಲೂಕು ಕಚೇರಿ, ದೂ.ಸಂ.: 080-27251765, ಮೊ.ಸಂ.: 8722898952, ಕನಕಪುರ ತಾಲ್ಲೂಕು ಕಚೇರಿ, ದೂ.ಸಂ.: 080-27522442, ಮಾಗಡಿ ತಾಲ್ಲೂಕು ಕಚೇರಿ, ದೂ.ಸಂ.: 080-27745651 ಅನ್ನು ಸಂಪರ್ಕಿಸಿ ದೂರು ದಾಖಲಿಸಬಹುದಾಗಿದೆ ಎಂದು ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತರು ಹಾಗೂ ಬೆಂಗಳೂರು ಶಿಕ್ಷಕರ ಕ್ಷೇತ್ರದ ಚುನಾವಣಾಧಿಕಾರಿ ನವೀನ್ ರಾಜ್ ಸಿಂಗ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಆಗ್ನೇಯ ಪದವೀಧರರ ಕ್ಷೇತ್ರ ವಿಧಾನ ಪರಿಷತ್ ಚುನಾವಣೆ: ದೂರು, ಮೇಲ್ವಿಚಾರಣೆಗಾಗಿ ಕಂಟ್ರೋಲ್ ರೂಂ ಸ್ಥಾಪನೆ

ಬೆಂಗಳೂರು, ಅಕ್ಟೋಬರ್ 14 (ಕರ್ನಾಟಕ ವಾರ್ತೆ):- ಭಾರತ ಚುನಾವಣಾ ಆಯೋಗವು ಕರ್ನಾಟಕ ಆಗ್ನೇಯ ಪದವೀಧರರ ಕ್ಷೇತ್ರದಿಂದ ಕರ್ನಾಟಕ ವಿಧಾನ ಪರಿಷತ್ತಿಗೆ ದ್ವೈವಾರ್ಷಿಕ ಚುನಾವಣೆ ನಡೆಸಲು ವೇಳಾಪಟ್ಟಿಯನ್ನು ನಿಗದಿಪಡಿಸಿದ್ದು, ಸದರಿ ಚುನಾವಣಾ ಪ್ರಕ್ರಿಯೆಯು ದಿನಾಂಕ: 01/10/2020 ರಿಂದ ದಿನಾಂಕ: 05/11/2020 ರವರೆಗೆ ನಡೆಯಲಿದ್ದು, ಚುನಾವಣೆಗೆ ಸಂಬಂಧಿಸಿದ ಸದಾಚಾರ ನೀತಿ ಸಂಹಿತೆಯ ದಿನಾಂಕ: 29/09/2020 ರಿಂದಲೇ ಜಾರಿಗೆ ಬಂದಿರುತ್ತದೆ.

ಚುನಾವಣೆಗೆ ಸಂಬಂಧಿಸಿದ ದೂರು, ಮೇಲ್ವಿಚಾರಣೆಗಾಗಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಕಂಟ್ರೋಲ್ ರೂಂ ಅನ್ನು ಸ್ಥಾಪಿಸಲಾಗಿದ್ದು, ಮತದಾನವು ದಿನಾಂಕ: 28/10/2020 ಬುಧವಾರದಂದು ನಡೆಯಲಿದೆ.

ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ರವರು ಕರ್ನಾಟಕ ಆಗ್ನೇಯ ಪದವೀಧರರ ಕ್ಷೇತ್ರದ ಚುನಾವಣಾಧಿಕಾರಿಯಾಗಿದ್ದು, ಚುನಾವಣಾ ಸಂಬಂಧಿತ ವಿವಿಧ ದೂರುಗಳಿಗೆ, ಮೇಲ್ವಿಚಾರಣೆ ಹಾಗೂ ನಿವಾರಣೆ ಸಲುವಾಗಿ ಕಂಟ್ರೋಲ್ ರೂಂ ಸ್ಥಾಪಿಸಲಾಗಿದೆ.

ಆಗ್ನೇಯ ಪದವೀಧರರ ಕ್ಷೇತ್ರ ಚುನಾವಣಾ ವ್ಯಾಪ್ತಿಗೆ ಚಿತ್ರದುರ್ಗ, ದಾವಣಗೆರೆ, ಚಿಕ್ಕಬಳ್ಳಾಪುರ, ಕೋಲಾರ ಹಾಗೂ ತುಮಕೂರು ಜಿಲ್ಲೆಗಳು ಬರಲಿದ್ದು, ಈ ಚುನಾವಣಾ ಸಂಬಂಧಿತ ವಿವಿಧ ದೂರುಗಳಿಗೆ ಮೇಲ್ವಿಚಾರಣೆ ಹಾಗೂ ನಿವಾರಣೆಗಾಗಿ ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತರ ಕಚೇರಿ, ದೂ.ಸಂ.: 080-22109680 ಅನ್ನು ಸಂಪರ್ಕಿಸಬಹುದಾಗಿದೆ.

ಚಿತ್ರದುರ್ಗ ಜಿಲ್ಲೆಯ ಜಿಲ್ಲಾಧಿಕಾರಿಯವರ ಕಚೇರಿಯ ಚುನಾವಣಾ ವಿಭಾಗ, ದೂ.ಸಂ.: 08194-222176, ಚಳ್ಳಕೆರೆ ತಾಲ್ಲೂಕು ಕಚೇರಿ, ದೂ.ಸಂ.: 08195-250648, ಚಿತ್ರದುರ್ಗ ತಾಲ್ಲೂಕು ಕಚೇರಿ, ದೂ.ಸಂ.: 08194-222416, ಹಿರಿಯೂರು ತಾಲ್ಲೂಕು ಕಚೇರಿ, ದೂ.ಸಂ.: 08193-263226, ಹೊಳಲ್ಕೆರೆ ತಾಲ್ಲೂಕು ಕಚೇರಿ, ದೂ.ಸಂ.: 08191-275062, ಹೊಸದುರ್ಗ ತಾಲ್ಲೂಕು ಕಚೇರಿ, ದೂ.ಸಂ.: 08199-230224, ಮೊಳಕಾಲ್ಮೂರು ತಾಲ್ಲೂಕು ಕಚೇರಿ, ದೂ.ಸಂ.: 08198-229234 ಅನ್ನು ಸಂಪರ್ಕಿಸಬಹುದಾಗಿದೆ.

ದಾವಣಗೆರೆ ಜಿಲ್ಲೆಯ ಜಿಲ್ಲಾಧಿಕಾರಿಯವರ ಕಚೇರಿ, ದೂ.ಸಂ.: 08192-272953, ದಾವಣಗೆರೆ ತಾಲ್ಲೂಕು ಕಚೇರಿ, ದೂ.ಸಂ.: 08192-235344, ಮಹಾನಗರ ಪಾಲಿಕೆ, ದೂ.ಸಂ.: 08192-234444, ಹರಿಹರ ತಾಲ್ಲೂಕು ಕಚೇರಿ, ದೂ.ಸಂ.: 08192-272959, ಜಗಳೂರು ತಾಲ್ಲೂಕು ಕಚೇರಿ, ದೂ.ಸಂ.: 08196-227242 ಅನ್ನು ಸಂಪರ್ಕಿಸಬಹುದಾಗಿದೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಜಿಲ್ಲಾಧಿಕಾರಿಯವರ ಕಚೇರಿಯ ಕಂಟ್ರೋಲ್ ರೂಂ, ದೂ.ಸಂ.: 08156-277071, ಬಾಗೇಪಲ್ಲಿ ತಾಲ್ಲೂಕು ಕಚೇರಿ, ದೂ.ಸಂ.: 08150-282225, ಚಿಕ್ಕಬಳ್ಳಾಪುರ ತಾಲ್ಲೂಕು ಕಚೇರಿ, ದೂ.ಸಂ.: 08156-272564, ಚಿಂತಾಮಣಿ ತಾಲ್ಲೂಕು ಕಚೇರಿ, ದೂ.ಸಂ.: 08154-252164, ಗೌರಿಬಿದನೂರು ತಾಲ್ಲೂಕು ಕಚೇರಿ, ಮೊ.ಸಂ.: 8867575221, ಗುಡಿಬಂಡೆ ತಾಲ್ಲೂಕು ಕಚೇರಿ, ದೂ.ಸಂ.: 08156-261250, ಶಿಡ್ಲಘಟ್ಟ ತಾಲ್ಲೂಕು ಕಚೇರಿ, ದೂ.ಸಂ.: 08158-256763 ಅನ್ನು ಸಂಪರ್ಕಿಸಬಹುದಾಗಿದೆ.

ಕೋಲಾರ ಜಿಲ್ಲೆಯ ಜಿಲ್ಲಾಧಿಕಾರಿಯವರ ಕಚೇರಿಯ ಕಂಟ್ರೋಲ್ ರೂಂ, ದೂ.ಸಂ.: 08152-243507, ಬಂಗಾರಪೇಟೆ ತಾಲ್ಲೂಕು ಕಚೇರಿ, ದೂ.ಸಂ.: 08153-255263, ಕೆಜಿಎಫ್ ತಾಲ್ಲೂಕು ಕಚೇರಿ, ದೂ.ಸಂ.: 08153-271674, ಕೋಲಾರ ತಾಲ್ಲೂಕು ಕಚೇರಿ, ದೂ.ಸಂ.: 08152-222056, ಮಾಲೂರು ತಾಲ್ಲೂಕು ಕಚೇರಿ, ದೂ.ಸಂ.: 08151-232699, ಮುಳಬಾಗಿಲು ತಾಲ್ಲೂಕು ಕಚೇರಿ, ದೂ.ಸಂ.: 08159-242049, ಶ್ರೀನಿವಾಸಪುರ ತಾಲ್ಲೂಕು ಕಚೇರಿ, ದೂ.ಸಂ.: 08157-245060 ಅನ್ನು ಸಂಪರ್ಕಿಸಬಹುದಾಗಿದೆ.

ತುಮಕೂರು ಜಿಲ್ಲೆಯ ಜಿಲ್ಲಾಧಿಕಾರಿಯವರ ಕಚೇರಿಯ ಚುನಾವಣಾ ವಿಭಾಗ, ದೂ.ಸಂ.: 0816-2252359/0816-2252361, ಚಿಕ್ಕನಾಯಕನಹಳ್ಳಿ ತಾಲ್ಲೂಕು ಕಚೇರಿ, ದೂ.ಸಂ.: 08133-267242, ಗುಬ್ಬಿ ತಾಲ್ಲೂಕು ಕಚೇರಿ, ದೂ.ಸಂ.: 08131-222234, ಕೊರಟಗೆರೆ ತಾಲ್ಲೂಕು ಕಚೇರಿ, ದೂ.ಸಂ.: 08138-232153, ಕುಣಿಗಲ್ ತಾಲ್ಲೂಕು ಕಚೇರಿ, ದೂ.ಸಂ.: 08132-220122, ಮಧುಗಿರಿ ತಾಲ್ಲೂಕು ಕಚೇರಿ, ದೂ.ಸಂ.: 08137-282324, ಪಾವಗಡ ತಾಲ್ಲೂಕು ಕಚೇರಿ, ದೂ.ಸಂ.: 08136-244242, ಶಿರಾ ತಾಲ್ಲೂಕು ಕಚೇರಿ, ದೂ.ಸಂ.: 08135-275243, ತಿಪಟೂರು ತಾಲ್ಲೂಕು ಕಚೇರಿ, ದೂ.ಸಂ.: 08134-251039, ತುಮಕೂರು ತಾಲ್ಲೂಕು ಕಚೇರಿ, ದೂ.ಸಂ.: 0816-2251364, ತುರುವೇಕೆರೆ ತಾಲ್ಲೂಕು ಕಚೇರಿ, ದೂ.ಸಂ.: 08139-287325 ಅನ್ನು ಸಂಪರ್ಕಿಸಿ ದೂರು ದಾಖಲಿಸಬಹುದಾಗಿದೆ ಎಂದು ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತರು ಹಾಗೂ ಆಗ್ನೇಯ ಪದವೀಧರರ ಕ್ಷೇತ್ರದ ಚುನಾವಣಾಧಿಕಾರಿ ನವೀನ್ ರಾಜ್ ಸಿಂಗ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ರಾಷ್ಟ್ರೀಯ ಸಾರ್ವಜನಿಕ ಉದ್ದಿಮೆಗಳ ಅತ್ಯುತ್ತಮ ಪ್ರಶಸ್ತಿ

**ಬೆಂಗಳೂರು, ಅಕ್ಟೋಬರ್ 14 (ಕರ್ನಾಟಕ ವಾರ್ತೆ):**

ಕೆ ಎಸ್ ಆರ್ ಟಿ ಸಿ ಯ ಉಪಕ್ರಮಗಳಾದ 'ಸ್ತ್ರೀ ಶೌಚಾಲಯ' ಮತ್ತು "ಮೊಬೈಲ್ ಫೀವರ್ ಕ್ಲಿನಿಕ್ " ಗಳಿಗೆ ರಾಷ್ಟ್ರೀಯ ಸಾರ್ವಜನಿಕ ಉದ್ದಿಮೆಗಳ ಅತ್ಯುತ್ತಮ ಪ್ರಶಸ್ತಿಯು "ಸಮಾಜದ ಅಭಿವೃದ್ಧಿಗಾಗಿ " ಸಾಮಾಜಿಕ ಕಳಕಳಿ ದಲ್ಲಿ ಲಭಿಸಿದೆ.
ಇಂದು ನಡೆದ ವರ್ಚುವಲ್ ಸಮ್ಮೇಳನದಲ್ಲಿ ಶ್ರೀ. ಶಿವಯೋಗಿ ಸಿ.ಕಳಸದ, ಭಾಆಸೇ, ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಆರ್.ಟಿ.ಸಿ ರವರು, ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡುತ್ತಾ, ಕೊವಿಡ್ ಪರಿಸ್ಥಿತಿಯಲ್ಲೂ ನಮ್ಮ ಸಿಬ್ಬಂದಿಗಳು ಕೊರೊನಾ ವಾರಿಯರ್ಸ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಈ ಪ್ರಶಸ್ತಿಯನ್ನು ನಮ್ಮ ಸಿಬ್ಬಂದಿಗಳಿಗೆ, ಅದರಲ್ಲಿಯೂ ಕೊವಿಡ್ ಗೆ ತುತ್ತಾಗಿ ತಮ್ಮ ಅಮೂಲ್ಯ ಪ್ರಾಣವನ್ನು ಕಳೆದುಕೊಂಡ ಸಿಬ್ಬಂದಿಗಳು ಹಾಗೂ ಅವರ ಪರಿವಾರದವರಿಗೆ ಈ ಪ್ರಶಸ್ತಿಯನ್ನು ಸಮರ್ಪಿಸುತ್ತೇನೆ ಎಂದರು.

ನಮ್ಮ ಸಾರಿಗೆ ನಿಗಮವು ಅತ್ಯಂತ ಕಠಿಣ ಪರಿಸ್ಥಿತಿಯನ್ನು ಎದುರಿಸುತ್ತಿದ್ದಾಗ್ಯೂ, ನಾವು ನಮ್ಮ ಕಾರ್ಯದಿಂದ ವಿಮುಖರಾಗದೆ, ಎಂದಿನಂತೆ ಶ್ರದ್ಧೆ ಮತ್ತು ಶ್ರಮವಹಿಸಿ ಕಾರ್ಯನಿರ್ವಹಿಸುತ್ತಿರುವ ಫಲ ಈ ಪ್ರಶಸ್ತಿಯಾಗಿದೆ. ಪ್ರಶಸ್ತಿ ಪುರಸ್ಕಾರಗಳು ನಮ್ಮ ಜವಾಬ್ದಾರಿಯನ್ನು ಹೆಚ್ಚಿಸುವುದರೊಂದಿಗೆ, ಸಾಮಾಜಿಕ ಬದ್ಧತೆಯಿಂದ ಇನ್ನೂ ಹೆಚ್ಚಿನ ಮಟ್ಟದಲ್ಲಿ ಕಾರ್ಯನಿರ್ವಹಿಸಲು ಪ್ರೋತ್ಸಾಹಿಸುತ್ತದೆ.

ಸ್ತ್ರೀ ಶೌಚಾಲಯ ಮತ್ತು ಮೊಬೈಲ್ ಫೀವರ್ ಕ್ಲಿನಿಕ್ ಈ ಎರಡೂ ಉಪಕ್ರಮಗಳನ್ನು ನಿಗಮದ ಅನುಪಯುಕ್ತ ಬಸ್ಸನ್ನು ಉಪಯೋಗಿಸಿಕೊಂಡು ನಿರ್ಮಿಸಿದ್ದು, ರಾಷ್ಟ್ರೀಯ ಮಟ್ಟದಲ್ಲಿ ಸದರಿ ಉಪಕ್ರಮಗಳ ಬಗ್ಗೆ ಒಳ್ಳೆಯ ಅಭಿಪ್ರಾಯ ಹಾಗೂ ಮಾನ್ಯತೆ ದೊರಕಿರುವುದು ಸಂತಸದ ಸಂಗತಿ. ಸದರಿ ಸಮ್ಮೇಳನದಲ್ಲಿ ಈ ಉಪಕ್ರಮಗಳ ನಿರ್ಮಾಣ, ವೆಚ್ಚ, ಉಪಯೋಗ , ಕಾರ್ಯ ನಿರ್ವಹಣೆ ಬಗ್ಗೆ ವ್ಯವಸ್ಥಾಪಕ ನಿರ್ದೇಶಕರಿಂದ ಮಾಹಿತಿ ವಿನಿಮಯ ಮಾಡಿಕೊಂಡರು.

# Award for Sthree Toilet' and 'Mobile Fever Clinic'

Bengaluru, October 15 (Karnataka Information)

KSRTC's initiatives, 'Sthree Toilet' and 'Mobile Fever Clinic', have been awarded the National Public Undertakings Award under the category" CSR for Social Development".

During a virtual award ceremony and conference, held today at Mumbai, Mr. Shivayogi C Kalasad, IAS, Managing Director, KSRTC, said, "Our staff is committed to being the Corona Warriors in the COVID situation, I would dedicate this award to the staff, especially the ones who have lost their precious lives and their family due to Covid. This award is the result of our diligent work even though our transport corporation is undergoing in difficult situation. This award will encourage us to work further more towards social commitment" he said.

Both the" Sthree Toilet" and "Mobile fever clinics" have been built using the Corporation's unused buses, and it is a matter of national recognition that these initiatives are well received. At

this conference, the Managing Director exchanged information on the construction, cost, utilization, and performance of these initiatives.